ಕರ್ನಾಟಕ ಸರಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

# ಸರಕಾರಿ ಮಹಾವಿದ್ಯಾಲಯ (ಸ್ವಾಯತ್ತ), ಕಲಬುರಗಿ

(ಗುಲಬರ್ಗಾ ವಿಶ್ವವಿದ್ಯಾಲಯದ ಸಂಲಗ್ನತೆ ಹೊಂದಿರುವ ಮತ್ತು ನ್ಯಾಕ್ ನಿಂದ ಬಿ+ ಶ್ರೇಣಿಯ ಮಾನ್ಯತೆ ಪಡೆದಿದೆ.

**ಸೇಡಂರಸ್ತೆ, ಕಲಬುರಗಿ– 585 105**

Email.govt.cleglb@gmail.com Website:www.gcak.ac.in

ಸಂಖ್ಯೆ:ಸಮವಿಕ/ಸ್ನಾತಕೋತ್ತರ/ಪ್ರವೇಶ//2026-27/178

ಪ್ರಾಂಶುಪಾಲರಕಚೇರಿ
ಸರಕಾರಿ ಮಹಾವಿದ್ಯಾಲಯ (ಸ್ವಾಯತ್ತ), ಕಲಬುರಗಿ
ದಿನಾಂಕ:10-07-2026

## ಸ್ನಾತಕೋತ್ತರ ಕೋರ್ಸಗಳಿಗೆ ಪ್ರವೇಶಅಧಿಸೂಚನೆ

2026-27 ನೇ ಶೈಕ್ಷಣಿಕ ಸಾಲಿಗಾಗಿ ಸರಕಾರಿ ಮಹಾವಿದ್ಯಾಲಯ (ಸ್ವಾಯತ್ತ)ಕಲಬುರಗಿಯಲ್ಲಿ ನಡೆಸಲಾಗುತ್ತಿರುವ ಈ ಕೆಳಕಂಡ ಸ್ನಾತಕೋತ್ತರ ಕೊರ್ಸಗಳ ಪ್ರವೇಶಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಅವ್ಹಾನಿಸಲಾಗಿದೆ.

| ಕ್ರ.ಸಂ | ಕೋರ್ಸಗಳು | ವಿಷಯ |
|---|---|---|
| 01 | ಎಂ.ಎ. | ಕನ್ನಡ,ಇಂಗ್ಲೀಷ,ಹಿಂದಿ,ಇತಿಹಾಸ,ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ |
| 02 | ಎಂ.ಎಸ್ಸಿ. | ಭೌತಶಾಸ್ತ್ರ,ಗಣಿತ,ಗಣಕವಿಜ್ಞಾನ,ಪ್ರಾಣಿಶಾಸ್ತ್ರ, ಸೂಕ್ಷ್ಮಜೀವಶಾಸ್ತ್ರ |
| 03 | ಎಂ.ಕಾಂ. | ಎಂ.ಕಾಂ. |

**ಎ.ಅರ್ಹತೆಗಳು:**

1. **ಎಂ.ಎ. (M.A)**

ಮಾನ್ಯತೆ ಪಡೆದ ವಿಶ್ವವಿದ್ಯಾಲಯಅಥವಾ ಸ್ವಾಯತ್ತ ಕಾಲೇಜುಗಳಿಂದಸ್ನಾತಕ ಪದವಿಯಲ್ಲಿ (ಬಿ.ಎ)ನಿಗದಿತ ವಿಷಯವನ್ನುಐಚ್ಛಿಕವಾಗಿಅಧ್ಯಯನಮಾಡಿ ವಿಷಯದಲ್ಲಿ ಮತ್ತು ಪದವಿಯ'ಲಿ ಸರಾಸರಿ 50% ಅಂಕಗಳೊಂದಿಗೆಉತ್ತೀರ್ಣರಾಗಿರತಕ್ಕದ್ದು. ಆದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ವರ್ಗ-1ರ ಅಭ್ಯರ್ಥಿಗಳು ಕನಿಷ್ಠ 45% ಅಂಕಗಳೊಂದಿಗೆ ಉತ್ತೀರ್ಣರಾಗಿರತಕ್ಕದ್ದು.ಭಾಷೆ ವಿಷಯಗಳಾದ ಕನ್ನಡ, ಇಂಗ್ಲೀಷ ಮತ್ತು ಹಿಂದಿ ಕೋರ್ಸಗಳಿಗೆ ಅಭ್ಯರ್ಥಿಗಳು ನಿಗದಿತ ವಿಷಯವನ್ನು ಐಚ್ಛಿಕವಾಗಿ ಅಥವಾ ಬೇಸಿಕ ತೆಗೆದುಕೊಂಡು ಓದಿದಲ್ಲಿ ಅರ್ಹರಾಗಿರುತ್ತಾರೆ.ಆದರೆ,ಆಯ್ಕೆ ಸಂದರ್ಭದಲ್ಲಿ ಐಚ್ಛಿಕ ವಿಷಯವನ್ನು ತೆಗೆದುಕೊಂಡವರಿಗೆ ಆದ್ಯತೆ ನೀಡಲಾಗುವುದು.

1. **ಎಂ.ಎಸ್ಸಿ(M.Sc.)**

ಮಾನ್ಯತೆ ಪಡೆದ ವಿಶ್ವವಿದ್ಯಾಲಯ ಅಥವಾ ಸ್ವಾಯತ್ತ ಕಾಲೇಜುಗಳಿಂದ ಬಿ.ಎಸ್ಸಿ. ಪದವಿ ಮತ್ತು ಸಂಬಂಧಿಸಿದ ವಿಷಯದಲ್ಲಿ ಸರಾಸರಿಯಾಗಿ ಕನಿಷ್ಠ ಶೇಕಡಾ 50% ಅಂಕಗಳೊಂದಿಗೆ ಉತ್ತೀರ್ಣರಾಗಿರತಕ್ಕದ್ದು, ಅದರೆ, ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1 ಕ್ಕೆ ಸೇರಿದ ವಿದ್ಯಾರ್ಥಿಗಳು ಶೇಕಡಾ 45% ಅಂಕಗಳೊಂದಿಗೆ ಉತ್ತೀರ್ಣರಾಗಿದ್ದಲ್ಲಿ ಅರ್ಹರಾಗಿರುತ್ತಾರೆ.

1.1 ಎಂ.ಎಸ್ಸಿ ಗಣಕವಿಜ್ಞಾನ(M.Sc.Computer Science)

ಮಾನ್ಯತೆ ಪಡೆದ ವಿಶ್ವವಿದ್ಯಾಲಯ ಅಥವಾ ಸ್ವಾಯತ್ತ ಕಾಲೇಜುಗಳಿಂದ ಬಿ.ಎಸ್ಸಿ ಪದವಿಯಲ್ಲಿ ಗಣಕವಿಜ್ಞಾನ ಮಾಹಿತಿ ವಿಜ್ಞಾನ, ಮಾಹಿತಿ ತಂತ್ರಜ್ಞಾನ ವಿಷಯವನ್ನು ಐಚ್ಛಿಕವಾಗಿ ತೆಗೆದುಕೊಂಡು ಅಥವಾಬಿ.ಸಿ.ಎ. ಪದವಿಯನ್ನು ಮೇಲ್ಕಂಡ ಕನಿಷ್ಠ ಅಂಕಗಳೊಂದಿಗೆ ಉತ್ತೀರ್ಣರಾಗಿರುವವರು ಅರ್ಹರಾಗಿರುತ್ತಾರೆ.

1.2 ಎಂ.ಎಸ್ಸಿ ಸೂಕ್ಷ್ಮಜೀವಶಾಸ್ತ್ರ(M.Sc Microbiology)

ಮಾನ್ಯತೆ ಪಡೆದ ವಿಶ್ವವಿದ್ಯಾಲಯ ಅಥವಾ ಸ್ವಾಯತ್ತಕಾಲೇಜುಗಳಿಂದ ಬಿ.ಎಸ್ಸಿ ಪದವಿಯಲ್ಲಿ ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಸೂಕ್ಷ್ಮಜೀವಶಾಸ್ತ್ರ, ರಸಾಯನಶಾಸ್ತ್ರ, ಜೀವರಸಾಯನಶಾಸ್ತ್ರ, ಜೈವಿಕತಂತ್ರಜ್ಞಾನ, ಪೌಷ್ಠಕತೆ ವಿಷಯಗಳ ಐಚ್ಛಿಕವಾಗಿ ತೆಗೆದುಕೊಂಡು ಮೇಲೆ ತಿಳಿಸಿದ ಕನಿಷ್ಠ ಅಂಕಗಳೊಂದಿಗೆ ಉತ್ತೀರ್ಣರಾಗಿರುವವರು ಅರ್ಹರಾಗಿರುತ್ತಾರೆ.

2. ಎಂ.ಕಾಂ(M.Com)

ಮಾನ್ಯತೆ ಪಡೆದ ವಿಶ್ವವಿದ್ಯಾಲಯ ಅಥವಾ ಸ್ವಾಯತ್ತಕಾಲೇಜುಗಳಿಂದ ಬಿ.ಕಾಂ/ಬಿಬಿಎಂ/ಬಿಬಿಎ ಪದವಿಯಲ್ಲಿ ಕನಿಷ್ಠ 50% ಅಂಕಗಳನ್ನು ಪಡೆದು ಉತ್ತೀರ್ಣರಾದ ವಿದ್ಯಾರ್ಥಿಗಳು ಎಂ.ಕಾಂ ಪ್ರವೇಶಕ್ಕೆ ಅರ್ಹರಾಗಿರುತ್ತಾರೆ.ಅದರೆ, ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1 ಕ್ಕೆ ಸೇರಿದ ವಿದ್ಯಾರ್ಥಿಗಳು ಶೇಕಡಾ 45% ಅಂಕಗಳೊಂದಿಗೆ ಉತ್ತೀರ್ಣರಾಗಿದ್ದಲ್ಲಿ ಎಂ.ಕಾಂ ಪ್ರವೇಶಕ್ಕೆ ಅರ್ಹರಾಗಿರುತ್ತಾರೆ.

**ಬಿ. ಆಯ್ಕೆ ವಿಧಾನ:**

ಮೇಲ್ಕಂಡ ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶವನ್ನು ಕರ್ನಾಟಕ ಸರಕಾರದ ಚಾಲ್ತಿಯಲ್ಲಿರುವ ಮೆರಿಟ್-ಮತ್ತು-ರೋಸ್ಟರ್‌ನಿಯಮಗಳಿಗನುಗುಣವಾಗಿ ಮತ್ತು ಕಾಲೇಜು ನಿಗದಿಪಡಿಸಿದ ಕೋರ್ಸ್‌ವಾರು ಸೀಟು (Intake)ನಿಯಮಗಳಿಗನುಗುಣವಾಗಿ ನೀಡಲಾಗುವುದು.

**ಸಿ :ಅಭ್ಯರ್ಥಿಗಳಿಗೆ ಸೂಚನೆಗಳು:**

1. ಮೇಲೆ ತಿಳಿಸಲಾದ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಬಯಸುವ ಅಭ್ಯರ್ಥಿಗಳು www.uucms.karnataka.gov.inಅಂತರ್ಜಾಲ ತಾಣಕ್ಕೆ ಭೇಟಿಕೊಟ್ಟು ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸುವುದು.
2. ಅಭ್ಯರ್ಥಿಯು ಪ್ರವೇಶ ಪಡೆಯಲಿಚ್ಛಿಸುವ ಪ್ರತಿಕೋರ್ಸ್‌ಗೆ ಪ್ರತ್ಯೇಕವಾಗಿಆನ್‌ಲೈನ್ ಮೂಲಕ ಅರ್ಜಿಸಲ್ಲಿಸಿ ನಿಗದಿತ ಶುಲ್ಕವನ್ನು ಪಾವತಿಸತಕ್ಕದ್ದು.
3. ಅರ್ಜಿ ಸಲ್ಲಿಸುವ ಪ್ರಕ್ರಿಯೆಯು ಅಭ್ಯರ್ಥಿಯು ಆನ್‌ಲೈನ್ ಮೂಲಕ ಅರ್ಜಿಸಲ್ಲಿಸಿ ನಿಗದಿತ ಶುಲ್ಕವನ್ನು ಪಾವತಿಸಿ,ಅರ್ಜಿಯ ಒಂದು ಮುದ್ರಿತ ಪ್ರತಿಯನ್ನು ಸಂಬಂಧಿಸಿದ ಎಲ್ಲಾ ದಾಖಲೆಗಳ ದೃಢೀಕೃತ ಪ್ರತಿಗಳೊಂದಿಗೆ ಕಾಲೇಜಿನ ಕಚೇರಿಗೆ ಅಂತಿಮ ದಿನಾಂಕದೊಳಗೆ ಸಲ್ಲಿಸಿದಾಗ ಮಾತ್ರ ಪೂರ್ಣವಾಗುತ್ತದೆ.
4. ವಿವಿಧ ಪ್ರವರ್ಗಗಳು, ವಿಶೇಷ ಪ್ರವರ್ಗಗಳು, ಅನುಚ್ಛೇದ(371ಜೆ) ಅಡಿಯಲ್ಲಿ ಪ್ರವೇಶ ಪಡೆಯಬಯಸುವ ಅಭ್ಯರ್ಥಿಗಳು ಸಂಬಂಧಿಸಿದ ಪ್ರಾಧಿಕಾರಗಳು ನೀಡುವ ಚಾಲ್ತಿಯಲ್ಲಿರುವ ಪ್ರಮಾಣ ಪತ್ರಗಳ ದೃಢೀಕೃತ ಪ್ರತಿ ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು. ಯಾವುದೇ ಸಂದರ್ಭದಲ್ಲಿ ಅರ್ಜಿಸಲ್ಲಿಸಿದ ನಂತರ ಸಲ್ಲಿಸುವ ದಾಖಲೆಗಳನ್ನು ಪರಿಗಣಿಸಲಾಗುವುದಿಲ್ಲ.
5. ಪದವಿ ಕೋರ್ಸ್‌ಗಳ ಅಂತಿಮ ಸೆಮಿಸ್ಟರ ಪರೀಕ್ಷೆಗೆ ಹಾಜರಾಗಿರುವ ಅಭ್ಯರ್ಥಿಗಳು ಪ್ರವೇಶಅರ್ಜಿ ಸಲ್ಲಿಸಲು ಅರ್ಹರಾಗಿದ್ದು ಅಂತಹ ಅಭ್ಯರ್ಥಿಗಳು **ಈ ಕಾಲೇಜು ನಿರ್ಧರಿಸುವ ಕೊನೆಯ** ದಿನಗಳೊಳಗಾಗಿ ಅಂಕಪಟ್ಟಿ/ದೃಢೀಕೃತಅಂಕಪಟ್ಟಿಯ ಪ್ರತಿಯನ್ನು ಕಾಲೇಜಿನ ಕಚೇರಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

6. ತಾತ್ಕಾಲಿಕಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ನಿಗದಿತ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವಾಗ ಪದವಿ ಕೋರ್ಸ್‌ನಎಲ್ಲಾ ಅಂಕಪಟ್ಟಿಗಳುಮತ್ತು ಸಂಬಂಧಿಸಿದ ಎಲ್ಲಾ ದಾಖಲೆಗಳ ಮೂಲಪ್ರತಿಗಳನ್ನು ಕಡ್ಡಾಯವಾಗಿ ಹಾಜರುಪಡಸತಕ್ಕದ್ದು.
7. ಮೇಲೆ ತಿಳಿಸಿದ ಯಾವುದೇ ಸ್ನಾತಕೋತ್ತರ ಕೋರ್ಸ್‌ಗಳಿಗೆ ಸರ್ಕಾರವು ನಿಗದಿಪಡಿಸಿದ ಪ್ರಮಾಣಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ದಾಖಲಾದಲ್ಲಿ ಅಂತಹ ಕೋರ್ಸ್‌ಗಳನ್ನು ಮುಂದುವರಿಸಲಾಗುವುದಿಲ್ಲ.

**8.ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡವರನ್ನು ಸಂಪರ್ಕಿಸುವುದು**

**Admission Committee:**

| | | |
|---|---|---|
| Dr.Ramakrishna | Chairman | 9480272477 |
| Dr.Nagappa Gogi | Member | 9686153485 |
| Dr.Ravindrakumar Bhandari | Member | 8123708365 |
| Dr.Azara Parveen | Member | 9972724313 |
| Dr.Savita Patil | Member | 9481540621 |

ಡಿ.ಅರ್ಜಿ ಶುಲ್ಕ

| | |
|---|---|
| ಪರಿಶಿಷ್ಟ ಜಾತಿ,ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1ಕ್ಕೆ ಸೇರಿದ ಅಭ್ಯರ್ಥಿಗಳಿಗೆ | ರೂ.100/- ಪ್ರತಿ ವಿಷಯಕ್ಕೆ |
| ಪ್ರವರ್ಗ-2ಎ,2ಬಿ,3ಎ,3ಬಿ ಮತ್ತು ಸಾಮಾನ್ಯ ವರ್ಗಕ್ಕೆ ಸೇರಿದ ಆಭ್ಯರ್ಥಿಗಳಿಗೆ | ರೂ.150/- ಪ್ರತಿ ವಿಷಯಕ್ಕೆ |

ಇ.ಪ್ರಮುಖ ದಿನಾಂಕಗಳು:

| | |
|---|---|
| ಆನ್‌ಲೈನ್‌ಅರ್ಜಿ ಸಲ್ಲಿಕೆ ಪ್ರಾರಂಭವಾಗುವ ದಿನಾಂಕ | 12-07-2026 |
| ಆನ್‌ಲೈನ್‌ಅರ್ಜಿ ಸಲ್ಲಿಸಲುಕೊನೆಯ ದಿನಾಂಕ | 11-08-2026 |
| ಸಂಬಂಧಿಸಿದ ದಾಖಲೆಗಳ ದೃಢೀಕೃತ ಪ್ರತಿಗಳೊಂದಿಗೆ ಅರ್ಜಿಯ ಮುದ್ರಿತ ಪ್ರತಿಕಾಲೇಜಿನ ಕಚೇರಿಗೆ ಸಲ್ಲಿಸಲು ಅಂತಿಮ ದಿನಾಂಕ | 14-08-2026 |

Note: ಪ್ರವೇಶಕ್ಕೆ ಸಂಬಂಧಿಸಿದ ಹೆಚ್ಚಿನ ವಿವರಗಳು ಮತ್ತು ಮಾಹಿತಿಗಾಗಿ ಅಭ್ಯರ್ಥಿಗಳು ಕಾಲೇಜಿನ ಅಧಿಕೃತ ಜಾಲತಾಣದಲ್ಲಿ **Website:www.gcak.ac.in** ಸಂಪರ್ಕಿಸಲು ತಿಳಿಸಲಾಗಿದೆ.

ಪ್ರಾಂಶುಪಾಲರು
ಸರಕಾರಿ ಮಹಾವಿದ್ಯಾಲಯ (ಸ್ವಾಯತ್ತ)
ಸೇಡಂ ರಸ್ತೆ, ಕಲಬುರಗಿ-585105

Copy to:
1. Dean Academic (PG), Government College (Autonomous), Kalaburagi
2. Controller of Examinations, Government College (Autonomous), Kalaburagi
3. Head / Coordinators of all the PG depts., Government College (Autonomous), Kalaburagi
4. PG Admission Committee, Government College (Autonomous), Kalaburagi
5. Office Copy